ಮೇಲೆ ನಜೀರ್ ಅವಾಜ್ ಯೋಜನೆಯ ಸೂಚನೆ ಬಂದಿದೆ. ಇದಕ್ಕೆ ಏನು ಮಾಡಿದ್ದೀರಿ ಎಂದರೆ ೬೦ ಮನೆಗಳಿಗೆ ಮಾತ್ರ ಹೊಸದಾಗಿ ಹಣ ಕೊಡುತ್ತಿದ್ದೀರಿ, ಉಳಿದ ೪೦ರ ಹಣಕ್ಕೆ ಪ್ಲಾನ್ ಸೈಜಿನಲ್ಲಿ ಡಿಫರೆನ್ಸ್‌ನಲ್ಲಿ ಕಟ್ ಮಾಡಿ ಅಡ್ಜಸ್ಟ್ ಮಾಡಬೇಕೆಂದು ಹೇಳುತ್ತಿದ್ದೀರಿ. ಈ ಯೋಜನೆಯನ್ನು ಬದಲಾವಣೆ ಮಾಡಿ ಈ ರೀತಿ ಮಾಡುವುದಕ್ಕಿಂತ ಈ ೪೦ ಮನೆಗಳಿಗೆ ಕೂಡ ಹೊಸದಾಗಿ ಹಣವನ್ನು ಅಲಾಟ್ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ. ಏಕೆಂದರೆ ನಮ್ಮ ಯೋಜನೆ ಪೂರ್ಣಗೊಂಡ ನಂತರ ಈ ಸೂಚನೆ ಬಂದಿದೆ.

ಶ್ರೀ ಎಂ. ಪಿ. ಪ್ರಕಾಶ್. —ಮಾನ್ಯ ಸದಸ್ಯರು ಎತ್ತಿರುವ ಸೂಚನೆ ಮೂಲಭೂತವಾದಂಥಾದ್ದು. ಏಕೆಂದರೆ ಎನ್‌ಆರ್‌ಇಪಿ ದುಡ್ಡಿನಲ್ಲಿ ಪುರುಹೊಂದಾಣಿಕೆ ಮಾಡಬೇಕಾಗಿರುವುದರಿಂದ ಅನೇಕ ಕಡೆ ಈ ಯೋಜನೆಯನ್ನು ಕಾರ್ಯಗತ ಗೊಳಿಸುವಂಥ ಸಂದರ್ಭದಲ್ಲಿ ಮನೆಗಳಿಗೆ ಹಣದ ಕೊರತೆಯಾಗಿದೆ ಎಂದು ಗೊತ್ತಾಗಿದೆ. ಈಗಾಗಲೇ ೧೧ ಕೋಟಿ ೪೩ ಲಕ್ಷ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿದೆ. ಉಳಿದಿರತಕ್ಕಂಥ ಹಣವನ್ನು ಬೇರೆ ಮೂಲಗಳಿಂದ ಭರಿಸಲು ಸರ್ಕಾರ ಜವಾಬ್ದಾರಿಯನ್ನು ಹೊರುತ್ತದೆ ಮರುಹೊಂದಾಣಿಕೆ ಮಾಡುವಂಥ ವೆಚ್ಚ ಬಂದಾಗ ಯಾರಿಗೂ ತೊಂದರೆಯಾಗದಂತೆ ಬೇರೆ ಕಡೆಯಿಂದ ಲಾದರೂ ಹಣ ತರುವ ಪ್ರಯತ್ನವನ್ನು ನಾವು ಮಾಡುತ್ತೇವೆ.

ಶ್ರೀ ಶಿವಶಂಕರಪ್ಪಗೌಡ ಶಿವಾರ್ಳ,—ನಜೀರ್‌ಅವಾಸ್ ಗ್ರೂಪ್ ಮನೆಗಳು ಬೇರೆ ಇವೆ. ಅದು ಎನ್.ಆರ್.ಇ.ಪಿ.ಯನ್ನೇ ಪರಿವರ್ತನೆ ಮಾಡಿ ನಜೀರ್‌ಅವಾಸ್ ಅನ್ನು ಮಾಡುತ್ತೀರಾ ? ಎರಡು ವರ್ಷಗಳಿಂದ ಯಾವುದೇ ಸಮೂಹ ಮನೆಗಳು ಎನ್.ಆರ್.ಇ.ಪಿ. ಯಲ್ಲಿ ಬಂದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್. —ಮಾನ್ಯ ಸದಸ್ಯರು ತಪ್ಪಾಗಿ ಭಾವಿಸಿರಬಹುದು. ಆರ್.ಎಲ್.ಇ.ಜಿಪಿ ಯಲ್ಲಿ ಗುಂಪು ಮನೆಗಳು ಇವೆ, ಇಂದಿರಾ ಆವಾಸ್ ಮನೆಗಳು ಎನ್.ಆರ್.ಇ.ಪಿ. ಯೋಜನೆಯಡಿ ಬರುತ್ತದೆ, ಇಲ್ಲಿಯವರೆಗೆ ಎನ್.ಆರ್.ಇ.ಪಿ. ಯೋಜನೆಯ ಕೆಳಗಡೆ ಇಂತಹ ಗುಂಪು ಮನೆಗಳ ವ್ಯವಸ್ಥೆ ಮಾಡಿರಲಿಲ್ಲ. ಈ ಒಂದು ಕಾನೂನಿಗೆ ಮೂಲಭೂತವಾದಂಥ ಆಗಲಿದ ದಿವಂಗತ ನಜೀರ್‌ಸಾಬ್ ಅವರ ಹೆಸರಿನಲ್ಲಿ ನಜೀರ್ ಅವಾಸ್ ಎನ್ನುವ ಒಂದು ಹೊಸ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಈ ಹೊಸ ಯೋಜನೆಯನ್ನು ಎನ್.ಆರ್.ಇ.ಪಿ. ಯಲ್ಲಿ ಮಾಡುತ್ತಿದ್ದೇವೆ.

ಬೆಳಗಾವಿ ಜಿಲ್ಲಾ ಪರಿಷತ್‌ಗೆ ಬಿಡುಗಡೆ ಮಾಡಲಾದ ಅನುದಾನ

೨೦೬ (೭೭೨) ಶ್ರೀ ಚಂದ್ರಶೇಖರ ಎಂ. ಮಾಮನಿ (ಪಾರನ್‌ಗಡ).— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ. —

ಅ) ದಿನಾಂಕ ೩೧–೩–೮೮ ರಿಂದ ೨೮–೨–೮೯ರವರೆಗೆ ಬೆಳಗಾವಿ ಜಿಲ್ಲಾ ಪರಿಷತ್ ಸಚಿವಾಲಯದಿಂದ ಎನ್.ಆರ್ ಇ.ಪಿ. ಆರ್.ಎಲ್,ಇ.ಜಿ.ಪಿ. ಡಿ.ಪಿ.ಎ.ಪಿ. ಪಶ್ಚಿಮ ಘಟ್ಟ ಹಾಗೂ ಇತರೆ ಯೋಜನೆಗಳಿಗೆ ತಾಲ್ಲೂಕುವಾರು ಬಿಡುಗಡೆ ಮಾಡಲಾದ ಹಾಗೂ ವೆಚ್ಚ ಮಾಡಲಾದ ಅನುದಾನದ ವಿವರ ನೀಡುವುದು.

ಆ) ಜಿಲ್ಲಾ ಪರಿಷತ್ ಬೆಳಗಾವಿ ತಾಂತ್ರಿಕ ವಿಭಾಗ ಚಿಕ್ಕೋಡಿ ಈ ವಿಭಾಗಕ್ಕೆ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಿದ ಅನುದಾನ ಎಷ್ಟು, ಇದರಂತೆ ಬೆಳಗಾವಿ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗ ಬೆಳಗಾವಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—

ಅ) ವಿವರಗಳನ್ನು ತಃಖ್ತೆ ೧,೨, ಮತ್ತು ೩ರಲ್ಲಿ ಕೊಟ್ಟಿರುತ್ತದೆ.

ಆ)

		ಜಿ.ಪ. ತಾಂತ್ರಿಕ ವಿಭಾಗ ಬೆಳಗಾವಿ	ಜಿ.ಪ. ತಾಂತ್ರಿಕ ವಿಭಾಗ ಚಿಕ್ಕೋಡಿ
		(ಲಕ್ಷ ರೂ.ಗಳಲ್ಲಿ)	
೧)	ಎನ್‌ಆರ್‌ಇಪಿ	೫೪.೧೬೯	೮೯.೩೮೭
೨)	ಆರ್‌ಎಲ್‌ಇಜಿಪಿ	೩೬.೦೯೬	೨೦.೭೭೧
೩)	ಪ.ಘ.ಅ.ಯೋ	೩೬.೩೨೦	—
೪)	ಡಿ.ಪಿ.ಎ.ಪಿ.	೧.೫೦೦	೩.೫೦೦

(ಇನ್ನುಳಿದ ಯೋಜನೆಗಳಲ್ಲಿ ಯಾವುದೇ ತಾಂತ್ರಿಕ ವಿಭಾಗಗಳಿಗೆ ಹಣವನ್ನು ಬಿಡುಗಡೆ ಮಾಡಿಲ್ಲ)

ತಃಖ್ತೆ—೧

ನಂ.	ತಾಲ್ಲೂಕು	ಯೋಜನೆ ಎನ್.ಆರ್.ಇ.ಪಿ.		ಆರ್.ಎಲ್.ಇ.ಜಿ.ಪಿ.	
		ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ
೧	೨	೩	೪	೫	೬
೧	ಅಥಣಿ	೨೯.೦೪೭	೨೬.೧೮೪	೧೭.೮೧೭	೧೧.೩೭೭
೨	ಬೈಲಹೊಂಗಲ	೨೨.೫೫೫	೧೯.೩೪೪	೧೮.೦೨೨	೧೩.೮೦೪
೩	ಬೆಳಗಾವಿ	೨೫.೭೯೨	೨೧.೯೬೪	೨೨.೮೪೩	೧೭.೫೦೦
೪	ಚಿಕ್ಕೋಡಿ	೨೨.೯೭೫	೧೮. ೨೨೩	೧೩.೧೭೩	೯.೩೮೦
೫	ಗೋಕಾಕ	೫೭.೭೬೧	೪೨,೬೧೩	೧೩.೫೬	೧೨.೮೭೭
೬	ಹುಕ್ಕೇರಿ	೨೭.೪೬೮	೧೮.೩೫೯	೧೩.೩೧೧	೯.೫೬೫
೭	ಖಾನಾಪೂರ	೧೮.೯೨೪	೧೪.೧೨೫	೧೭.೨೨	೧೩.೫೪೬
೮	ರಾಯಬಾಗ	೨೦.೭೬೬	೧೭.೦೫೮	೧೧.೪೪೫	೮.೯೮೪
೯	ರಾಮದುರ್ಗ	೧೯.೩೦೮	೧೧.೭೭೭	೨೧.೦೫೩	೧೧.೧೪೦
೧೦	ಸವದತ್ತಿ	೩೧.೮೨೫	೨೫.೬೭೧	೧೮.೪೧೬	೧೨.೪೫೨
	ಅರಣ್ಯ—	೧೪.೦೭೧	(—)	೮.೫೯೩	ಅನುದಾನವನು ಇಲಾಖೆಯವರು
	ಒಟ್ಟು	೨೯೦.೯೩೨	೨೧೫.೩೧೮	೧೫೮.೦೦೪	೧೨೦.೬೨೫

ಆರ್.ಇ.ಜಿ.ಎಸ್		ಡಿ.ಪಿ.ಎ.ಪಿ.		ಪಶ್ಚಿಮ ಘಟ್ಟ	
ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ
೭	೮	೯	೧೦	೧೧	೧೨
		೮.೩೨	೮.೫೭	—	—
		—	—	೩.೯೯೬	೩.೪೨೧
		—	—	೧೨,೫೫೭	೬.೫೭೪
೦.೭೫೧	೦.೭೫೧	—	—	—	—
		೧೪.೯೨	೧೫.೦೮	—	—
		—	—	೦.೭೪೧	೦.೬೭೮
		—	—	೩೬.೮೯೩	೩೬.೩೧೮
		೦.೯೬	೦.೬೬	—	—
		೯.೨೨	೯.೪೮	—	—
		೯.೬೪	೯.೮೯	೨.೭೧೬	೧.೪೫೭
ಎನ್.ಆರ್.ಇಪಿ. ಯಿಂದ ಅರಣ್ಯ, ವರ್ಗಾಯಿಸಿರುವರು				೨೬.೪೬೮	೩.೪೧೫
೦.೭೫೧	೦.೭೫೧	೪೨.೭೬	೪೩.೬೮	೮೩.೩೭೧	೫೧.೮೬೩

ತಃಖ್ತೆ–೨

ಸಂಖ್ಯೆ	ತಾಲ್ಲೂಕಿನ ಹೆಸರು	ಐ.ಆರ್.ಡಿ.ಪಿ.		೧೦೦ ಬಾಗವಿಳು		ಅಂತ್ಯೋದಯ	
		ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
೧	೨	೩	೪	೫	೬	೭	೮
೧.	ಅಥಣಿ	೨೩.೭೬	೧೭.೬೩	೩.೧೭	೩.೧೭	೦,೬೮	೦.೬೮
೨,	ಬೈಲಹೊಂಗಲ	೧೯-೮೦	೧೬.೪೫	೩.೪೮	೩.೪೮	೦.೦೪	೦.೦೪
೩.	ಬೆಳಗಾಂ	೨೦.೭೯	೧೭.೭೪	೪,೬೧	೪.೬೧	—	—
೪.	ಚಿಕ್ಕೋಡಿ	೨೮.೭೧	೨೪.೧೩	೧.೪೫	೧.೪೫	—	—
೫.	ಗೋಕಾಕ್	೨೦.೭೯	೧೭.೪೬	೧.೭೩	೧.೭೩	—	—
೬.	ಹುಕ್ಕೇರಿ	೧೯.೮೦	೧೬.೦೫	೨.೦೧	೨,೦೧	೦.೬೧	೦.೬೧
೭.	ಖಾನಾಪುರ	೭೩.೭೬	೧೫.೯೦	೨.೨೯	೨.೨೯	—	—
೮.	ರಾಮದುರ್ಗ	೧೦.೮೯	೭.೯೯	೧.೧೫	೧.೧೫	೦.೩೮	೦.೩೮
೯.	ರಾಯಬಾಗ್	೧೨.೮೭	೧೨,೬೯	೨.೧೯	೨.೧೯	೦.೩೮	೦.೩೮
೧೦.	ಸೌಂದತ್ತಿ	೧೬.೮೩	೧೨.೫೫	೩.೧೫	೩.೧೫	—	—
	ಒಟ್ಟು	೧೯೮.೦೦	೧೫೮.೫೯	೨೫.೨೩	೨೫.೨೩	೨.೦೯	೨.೦೯

ಟಿಪ್ಪಣಿ.—ಅಂತ್ಯೋದಯ ಯೋಜನೆಯನ್ನು ಬೆಳಗಾವಿ ಜಿಲ್ಲೆಯ ಅಥಣಿ. ಬೈಲಹೊಂಗಲ, ಹುಕ್ಕೇರಿ

(ಲಕ್ಷ ರೂ.ಗಳಲ್ಲಿ)

ತುಂತುರು ನೀರಾವರಿ		ಟ್ರೈಸಮ್		ಗೋಬರ್ ಗ್ಯಾಸ್		ಹೆಚ್ಚುವರಿ ಭೂಮಿಯನ್ನು ಪಡೆದವರಿಗೆ ನೆರವು	
ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
೯	೧೦	೧೧	೧೨	೧೩	೧೪	೧೫	೧೬
೧.೦೫	೧.೦೫	೦.೧೬	೦.೧೬	೦.೪೦	೦.೪೦	೦.೦೮೯	೦.೦೮೯
೦.೨೦	೦.೨೦	೦ ೨೨	೦.೨೨	೩.೮೫	೩.೮೫	—	—
೦.೨೩	೦.೨೩	೦ ೩೬	೦.೩೬	೮.೫೭	೮.೫೭	೮.೦೧೯	೦.೦೧೯
೧.೦೫	೧.೦೫	೦.೨೬	೦.೨೬	೧.೨೦	೧.೨೦	೦.೧೫೦	೦.೧೫೦
೦.೪೪	೦.೪೪	೦.೩೦	೦.೩೦	೦.೨೯	೦.೨೯	೦-೪೦೬	೦.೪೦೬
೦.೧೦	೦.೧೦	೦.೨೪	೦.೨೪	೩.೨೭	೩.೨೭	—	—
೦.೨೨	೦.೨೨	೦,೨೫	.೨೫	೪.೧೩	೪.೧೩	೦.೨೨೦	೦.೨೦೦
೦.೨೩	೦.೨೩	೦.೩೩	೦.೩೩	೦.೦೭	೦,೦೭	೦.೦೯೨	೦.೦೯೨
—	—	೦.೩೨	೦.೩೨	೦ ೦೫	೦.೦೫	—	—
೦.೨೩	೦.೨೩	೦.೨೮	೦.೨೮	೧.೫೨	೧ ೫೨	೦.೧೭೧	೦,೧೭೧
೨.೭೫	೨.೭೫	೨.೭೨	೨.೭೨	೨೩.೩೫	೨೩.೩೫	೧.೧೪೭	೧.೧೪೭

ರಾಮದುರ್ಗ ಮತ್ತು ರಾಯಭಾಗ ತಾಲ್ಲೂಕುಗಳಲ್ಲಿ ಮಾತ್ರ ಕಾರ್ಯಗತಗೊಳಿಸಲಾಗುತ್ತಿದೆ.

ತಃಖ್ತೆ–೩

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಬೆಳಗಾವಿ ಜಿಲ್ಲೆಯ ತಾಲ್ಲೂಕುಗಳು	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ		ರಾಷ್ಟ್ರೀಯ ಸುಧಾರಿತ ಒಲೆಗಳ ಅಭಿವೃದ್ಧಿ ಯೋಜನೆ		ಸಮಗ್ರ ಗ್ರಾಮೀಣ ಇಂಧನಶಕ್ತಿ ಕಾರ್ಯಕ್ರಮ	
		ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು
೧	೨	೩	೪	೫	೬	೭	೮
೧.	ಬೆಳಗಾವಿ	೮.೭೦	೮.೭೦	೦.೧೦	೦.೦೧	—	—
೨.	ಖಾನಾಪುರ	೪.೨೪	೪.೨೪	೦.೧೫	೦.೦೧	—	—
೩.	ಹುಕ್ಕೇರಿ	೩.೧೭	೩.೧೭	೦.೧೫	೦.೦೧	—	—
೪.	ಬೈಲಹೊಂಗಲ	೩.೫೯	೩.೫೯	೦.೧೫	—	—	—
೫.	ಸೌಂದತ್ತಿ	೧.೫೨	೧.೫೨	೦.೧೫	—	—	—
೬.	ರಾಮದುರ್ಗ	೦.೦೭	೦.೦೭	೦.೧೦	—	—	—
೭.	ಗೋಕಾಕ್	೦,೨೫	೦.೨೫	೦.೧೫	—	—	—
೮.	ಚಿಕ್ಕೋಡಿ	೧.೨೨	೧.೨೨	೦.೧೫	—	೫.೦೦	೦.೮೭
೯.	ರಾಯಭಾಗ	೦.೧೯	೦.೧೯	೦.೧೫	—	—	—
೧೦.	ಅಥಣಿ	೦.೪೩	೦.೪೩	೦.೧೫	—	—	—
	ಒಟ್ಟು	೨೩.೩೮	೨೩ ೩೮	೧.೪೦	೦.೦೩	೫.೦೦	೦.೮೭

ಶ್ರೀ ಚಂದ್ರಶೇಖರ ಎಂ. ಮಾಮನಿ.—ಸನ್ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯ್ತಿಗಳು ಬಂದಮೇಲೆ ಅನುದಾನವನ್ನು ಬಿಡುಗಡೆ ಮಾಡುವಾಗ, ತಲಾವಾರು ಅನುದಾನ ಬಿಡುಗಡೆ ಮಾಡುವಂಥ ನಿಯಮ ಇದೆಯೇ? ಈ ನಿಯಮ ಇದ್ದರೆ, ಬೆಳಗಾಂ ವಿಭಾಗಕ್ಕೆ ೫೪ ಲಕ್ಷ ರೂಪಾಯಿ, ಚಿಕ್ಕೋಡಿ ವಿಭಾಗಕ್ಕೆ ೮೯ ಲಕ್ಷ ರೂಪಾಯಿ ಮತ್ತು ಪಶ್ಚಿಮ ಘಟ್ಟಗಳ ಯೋಜನೆಯೊಳಗೆ, ತಲಾವಾರು ಮಾಹಿತಿ ಕೊಟ್ಟಿರುವ ಪ್ರಕಾರ, ನನ್ನ ಮತಕ್ಷೇತ್ರವಾದ ಸವದತ್ತಿಗೆ ಕೇವಲ ೨ ಲಕ್ಷ, ಖಾನಾಪುರಕ್ಕೆ ೩೬ ಲಕ್ಷ ಖರ್ಚು ಮಾಡಿದ್ದೀರಿ. ಈ ರೀತಿಯ ತಾರತಮ್ಯ ಏಕೆ? ತಾವೇನಾದರೂ ಈ ರೀತಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಸೂಚನೆ ಮಾಡಿದ್ದೀರಾ, ಹೇಗೆ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ, ನೇರವಾಗಿ ಹಣವನ್ನು ಜಿಲ್ಲಾಪರಿಷತ್ತಿಗೆ ನಾವು ಬಿಡುಗಡೆ ಮಾಡುತ್ತೇವೆ. ಅಲ್ಲಿಯ ಯೋಜನೆಯನ್ನು ರೂಪಿಸುವುದು ಆಯಾ ಜಿಲ್ಲಾಪರಿಷತ್‌ನ ಅಧಿಕಾರದ ವ್ಯಾಪ್ತಿಗೆ ಬರುತ್ತದೆ. ಎನ್.ಆರ್.ಇ.ಪಿ. ನಲ್ಲಿ ಬೆಳಗಾವಿ ವಿಭಾಗಕ್ಕೆ ೫೪ ಲಕ್ಷ ಖರ್ಚು ಮಾಡಿದ್ದರೆ, ಚಿಕ್ಕೋಡಿಗೆ ೮೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿಯ ಅಗತ್ಯತೆಗಳ ಮೇಲೆ, ಅಲ್ಲಿಯ ಕೆಲಸಗಳ ಅಗತ್ಯಗಳ ಮೇಲೆ, ಮತ್ತು ಅಲ್ಲಿಯ ಸರ್ವ ಸದಸ್ಯರ ಅಭಿಪ್ರಾಯದ ಮೇರೆಗೆ ಯೋಜನೆಗಳನ್ನು ರೂಪಿಸಿರಬಹುದು. ಒಂದು ವೇಳೆ ಪ್ರಾದೇಶಿಕ ಅಸಮಾನತೆ ಅಥವಾ ಯಾವುದೋ ಒಂದು ಕ್ಷೇತ್ರದ ಬಗ್ಗೆ ಹೆಚ್ಚು ಪಕ್ಷಪಾತ ಆಗಿದ್ದರೆ, ಇದರ ಬಗ್ಗೆ ವಿಚಾರಣೆ ಮಾಡುತ್ತೇನೆ ಮತ್ತು ಇದಕ್ಕೆ ಸರಿಯಾದ ಮಾರ್ಗಸೂಚಿಯನ್ನು ಈ ರೀತಿ ಆಗಬಾರದು ಎಂದು ಜಿಲ್ಲಾಪರಿಷತ್ತಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಚಂದ್ರಶೇಖರ ಎಂ. ಮಾಮನಿ.—ನಮ್ಮ ಜಿಲ್ಲಾ ಮಂತ್ರಿಗಳಾದ ದೇಶಪಾಂಡೆಯವರು ಜಿಲ್ಲಾಪರಿಷತ್ ಸಭೆಗೆ ಬಂದಾಗ, ತಲೆ ಆಧಾರದ ಮೇಲೆ ಗ್ರಾಂಟ್ಸ್ ಬಿಡುಗಡೆ ಮಾಡುತ್ತೇವೆಂದೂ

ಈ ರೀತಿಯ ಅಸಮಾನತೆ ಮಾಡಬಾರದೆಂದೂ ಸೂಚನೆ ಕೊಟ್ಟಿದ್ದರೂ ಕೂಡ ಈ ರೀತಿ ಏಕೆ ಆಯಿತು? ಮುಂದಿನ ವರ್ಷವಾದರೂ ಈ ಅಸಮಾನತೆಯನ್ನು ಸರಿಪಡಿಸುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್.—ಇದರಲ್ಲಿ ತಲಾವಾರು ಅನುದಾನ ಕೊಡುವುದೂ ಕೂಡ ವರ್ಗ ಗಿರಲ್ಲಿ ಬರುವುದು ಮಂಡಲ್ ಪಂಚಾಯ್ತಿಗಳಿಗೆ ಕೊಡುವುದು ಏಳೂವರೆ ರೂಪಾಯಿ ಜಿಲ್ಲಾ ಪರಿಷತ್ತಿಗೆ ಎರಡೂವರೆ ರೂಪಾಯಿ ತಲಾವಾರು ಕೊಡಬೇಕಾದ್ದು. ಆದರೆ ಅಭಿವೃದ್ಧಿ ಕಾರ್ಯಗಳಿಗೆ ಕೊಡತಕ್ಕ ಯೋಜನಾ ವೆಚ್ಚ ಏನಿದೆ. ಅದು ಜಿಲ್ಲಾಪರಿಷತ್ತಿನವರು ತಯಾರು ಮಾಡಿರತಕ್ಕ ಯೋಜನೆಗಳಿಗನುಗುಣವಾಗಿ, ಕೆಲಸಕಾರ್ಯಗಳಾಗಿರುತ್ತವೆ. ಈ ದೃಷ್ಟಿಯಿಂದ ದೇಶಪಾಂಡೆಯವರು ಈ ವಿಷಯವನ್ನು ಆ ಸಂದರ್ಭದಲ್ಲಿ ಹೇಳಿರಬಹುದು. ಇಲ್ಲಿ ಪಶ್ಚಿಮಘಟ್ಟಗಳ ಯೋಜನೆಯಲ್ಲಿ ೩೬ ಲಕ್ಷ ರೂಪಾಯಿ ಬೆಳಗಾಂ ವಿಭಾಗದಲ್ಲಿ ಒಂದು, ಚಿಕ್ಕೋಡಿ ವಿಭಾಗದಲ್ಲಿ ಒಂದು ರೂಪಾಯಿ ಕೂಡ ಖರ್ಚು ಮಾಡಿಲ್ಲ. ಖಾನಾಪುರದಲ್ಲಿ ಹೆಚ್ಚು ಖರ್ಚಾಗಿದೆ ಎಂದು ತಾವು ಹೇಳಿದ್ದೀರಿ. ಈ ರೀತಿಯ ಪ್ರಾದೇಶಿಕ ಅಸಮಾನತೆ ಆಗದಂತೆ, ಯಾವುದೇ ಕ್ಷೇತ್ರಕ್ಕೆ ಹೆಚ್ಚು ಪಕ್ಷಪಾತವಾಗದಂತೆ ನೋಡಿ ಕೊಳ್ಳಬೇಕು ಎನ್ನುವ ಮಾರ್ಗಸೂಚಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಚಂದ್ರಶೇಖರ್ ಎಂ. ಮಾವಿನಿ.—ಪಶ್ಚಿಮಘಟ್ಟ ಯೋಜನೆ ಚಿಕ್ಕೋಡಿ ವಿಭಾಗಕ್ಕೆ ಇಲ್ಲವೇ ಇಲ್ಲ. ಬೆಳಗಾಂ ವಿಭಾಗಕ್ಕೆ ಮಾತ್ರ ಇರುವುದು. ಖಾನಾಪುರ ವಿಭಾಗಕ್ಕೆ ೩೬ ಲಕ್ಷ ಬಂದು. ನನ್ನ ಕ್ಷೇತ್ರಕ್ಕೆ ೨ ಲಕ್ಷ ಮಾತ್ರ ಬಂದಿದೆ. ಇದನ್ನು ಸರಿಪಡಿಸುವಂತೆ ವಿನಂತಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ತಿಳಿದುಕೊಂಡಿದ್ದೇನೆ. ಒಳ್ಳೆಯ ಮಾತನ್ನು ಹೇಳಿದ್ದಾರೆ. ಈ ರೀತಿಯಾಗಿ ಒಂದು ತಾಲ್ಲೂಕಿಗೆ ಎರಡು ಲಕ್ಷ ಬೇರೆ ತಾಲ್ಲೂಕಿಗೆ ೩೬ ಲಕ್ಷ ಕೊಡುವುದು ಯೋಗ್ಯವಲ್ಲ. ಇದರ ಬಗ್ಗೆ ಸೂಚನೆಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್. ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಒಂದು ಪ್ರಮಾದವಾಗಿದೆ. ಪ್ರಶ್ನೆ ನಂಬರ್ ೨೦೭ (೭೬೮) ನಾನು ಕೇಳುವ ಪ್ರಶ್ನೆ ಅಲ್ಲ. ಇದು ತುರುವೇಕೆರೆ ಕ್ಷೇತ್ರದ್ದು. ರಾಮಕೃಷ್ಣಯ್ಯನವರು ಇದನ್ನು ಕೇಳಬೇಕು. ನಿಮ್ಮ ವಿಧಾನ ಮಂಡಲದ ಅಧಿಕಾರಿಗಳು ಈ ರೀತಿ ಕೆಲಸ ಮಾಡುತ್ತಾರೆ. ನೀವು ಆ ರೀತಿಗೆ ಸ್ವಲ್ಪ ಬುದ್ಧಿ ಹೇಳಿ. ತುರುವೇಕೆರೆ ವಿಚಾರ ಕಟ್ಟಿಕೊಂಡು ನನಗೇನಾಗಬೇಕು.

ಶ್ರೀ ಎಂ.ಪಿ. ಪ್ರಕಾಶ್.—ಇದು ತುರುವೇಕೆರೆಗೆ ಸಂಬಂಧಪಟ್ಟಿರುವುದರಿಂದ, ಈ ವಿಷಯವನ್ನು ಬಾಬುರೆಡ್ಡಿ ತುಂಗಳ್ ಅವರು ಕೇಳಿಲ್ಲವೆಂದು ನನಗನಿಸಿತು. ಆದರೂ, ಯಾರು ಇದನ್ನು ಕಳುಹಿಸಿದ್ದಾರೆ, ಅವರಿಗೇ ಉತ್ತರ ಕೊಡುತ್ತೇನೆ. ಒಂದು ಊರಿನ ಪ್ರಶ್ನೆ ಕೇಳಿದ್ದಾರೆ.

ಶ್ರೀ ಎಂ. ರಘುಪತಿ.—ಪ್ರಶ್ನೆ ಕೇಳುವವರ ಹೆಸರು ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ ಅವರು, ತಮ್ಮ ಹೆಸರು ಇಲ್ಲವೆಂದು ಹೊರಟು ಹೋಗಿದ್ದಾರೆ. ಆದ್ದರಿಂದ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕು.

ಉಪಾಧ್ಯಕ್ಷರು.—೨೦೭(೭೬೮)ರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಬೆಂಗ್ರೆ ಮಂಡಲ ಪಂಚಾಯತ್

(೯೯೦) ೨೦೮ ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಪಶು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮಂಗಳೂರಿನ ಸಮೀಪದ ಬೆಂಗ್ರೆಯಲ್ಲಿ ಸುಮಾರು ನಾಲ್ಕು ಸಾವಿರ ಜನರು ವಾಸ ಮಾಡುತ್ತಿರುವುದು ನಿಜವೆ?